ಕೆ.ಆರ್.ಪೇಟೆ ಸಾರ್ವಜನಿಕ ಆಸ್ಪತ್ರೆಗೆ ವೈದ್ಯರನ್ನು ನೇಮಕ ಮಾಡುವ ಬಗ್ಗೆ :

55 (440) ಶ್ರೀ ಚಂದ್ರಶೇಖರ್ ಕೆ.ಬಿ. (ಕೆ.ಆರ್.ಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕು ಕೇಂದ್ರದಲ್ಲಿರುವ ಸಾರ್ವಜನಿಕ ಆಸ್ಪತ್ರೆಗೆ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದರೆ, ಕೆ.ಆರ್.ಪೇಟೆ ಆರೋಗ್ಯ ಕೇಂದ್ರಕ್ಕೆ ಬರುವ ರೋಗಿಗಳ ಸಂಖ್ಯೆ ಜಾಸ್ತಿ ಇದ್ದು, ರೋಗಿಗಳನ್ನು ಗುಣಪಡಿಸಲು ವೈದ್ಯರುಗಳ ಕೊರತೆಯಿರುವುದರಿಂದ ಸರ್ಕಾರದ ವೈದ್ಯರ ನೇಮಕಕ್ಕೆ ಯಾವ ತೀರ್ಮಾನ ಕೈಗೊಂಡಿರುತ್ತದೆ;

ಇ) ಕೆ.ಆರ್.ಪೇಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಟ್ಟು ವೈದ್ಯರ ಹುದ್ದೆಗಳು ಎಷ್ಟು; ಇದರಲ್ಲಿ ಹಾಲಿ ಖಾಲಿ ಇರುವ ಹುದ್ದೆಗಳು ಎಷ್ಟು;

ಈ) ಈ ಬಗ್ಗೆ ಸರ್ಕಾರ ವೈದ್ಯರ ನೇಮಕ ಮಾಡಲು ಯಾವ ಕ್ರಮ ತೆಗೆದುಕೊಂಡಿದೆ ಎಂಬುದರ ಬಗ್ಗೆ ಮಾಹಿತಿಯನ್ನು ನೀಡುವುದು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) 2010ರಲ್ಲಿ ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ವೈದ್ಯರ ಮೂಲಕ ಖಾಲಿ ತಜ್ಞ ಹುದ್ದೆಗಳನ್ನು ಭರ್ತಿ ಮಾಡಲು ಆದ್ಯತಾನುಸಾರ ಕ್ರಮ ವಹಿಸಲಾಗುವುದು.

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿನ ತಜ್ಞ ವೈದ್ಯರ ಕೊರತೆಯನ್ನು ನೀಗಿಸಲು ಕೆಳಕಂಡಂತೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ:

1. (1) ಮಕ್ಕಳ ತಜ್ಞರು, (2) ಅರವಳಿಕೆ ತಜ್ಞರು ಹಾಗೂ (3) ಸ್ತ್ರೀರೋಗ ತಜ್ಞರುಗಳ ಕೊರತೆಯನ್ನು ನೀಗಿಸಲು ಮಾಸಿಕ ಗರಿಷ್ಠ ರೂ.50.000 ರವರೆಗೆ ಗೌರವ ಧನ ನೀಡಿ ನೇಮಕ ಮಾಡಿಕೊಳ್ಳಲು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ (ಎನ್.ಆರ್.ಹೆಚ್.ಎಂ.) ಅಡಿ ಅವಕಾಶ ಕಲ್ಪಿಸಲಾಗಿದೆ. ಹಾಗೂ ಇದೇ ಯೋಜನೆಯಡಿ ಪ್ರಕರಣವಾರು ಆಧಾರದ ಮೇಲೆ ಪ್ರತೀ

ಪ್ರಕರಣವೊಂದಕ್ಕೆ (1) ಮಕ್ಕಳ ತಜ್ಞರಿಗೆ ರೂ.500 (2) ಅರವಳಿಕೆ ತಜ್ಞರಿಗೆ ರೂ.1.000 ಹಾಗೂ (3) ಸ್ತ್ರೀರೋಗ ತಜ್ಞರಿಗೆ ರೂ.1.500 ರಂತೆ ನೀಡಲು ಸಹ ಅವಕಾಶ ಕಲ್ಪಿಸಲಾಗಿದೆ.

2. ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣಾ ಯೋಜನೆ (ಕೆ.ಹೆಚ್.ಎಸ್.ಡಿ.ಆರ್.ಪಿ) ರ ಅಡಿಯಲ್ಲಿ ಮೇಲ್ಕಂಡ 3 ತಜ್ಞತೆಗಳನ್ನು ಹೊರತುಪಡಿಸಿ ಉಳಿದ ತಜ್ಞತೆಯಲ್ಲಿ ಮಾಸಿಕ ರೂ.5.000 ಗೌರವ ಧನ ನೀಡಿ ರಿಟೈನರ್‌ಶಿಪ್ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇದೇ ಕೆ.ಹೆಚ್.ಎಸ್.ಆರ್.ಡಿ.ಪಿ. ಯೋಜನೆಯಡಿ, ಸದರಿ ತಜ್ಞರು ಹೊರರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ರೂ. 1.000 ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಆದರೆ ವಾರಕ್ಕೆ ಎರಡು ದಿನಕ್ಕೆ ಮಾತ್ರ ಅಂತಹ ಸೇವೆಯನ್ನು ಪಡೆಯಲು ಮಿತಿಗೊಳಿಸಲಾಗಿದೆ.

ಇ) ಸಾರ್ವಜನಿಕ ಆಸ್ಪತ್ರೆ ಕೆ.ಆರ್.ಪೇಟೆಗೆ 9 ತಜ್ಞ ವೈದ್ಯಾಧಿಕಾರಿಗಳು ಹಾಗೂ 2 ದಂತಹ ವೈದ್ಯಾಧಿಕಾರಿಗಳು ಅಂದರೆ, ಒಟ್ಟು 11 ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 4 ತಜ್ಞ ವೈದ್ಯರುಗಳ ಹುದ್ದೆಗಳು ಖಾಲಿ ಇರುತ್ತವೆ ಹಾಗೂ 2 ದಂತ ಆರೋಗ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ.

ಈ)

1. 2010 ರಲ್ಲಿ ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ತಜ್ಞ ವೈದ್ಯರನ್ನು ಆದ್ಯತೆ ಮೇಲೆ ಸ್ಥಳನಿಯುಕ್ತಿ ಮಾಡುವ ಮೂಲಕ ತಜ್ಞ ವೈದ್ಯರು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.
2. (1) ಮಕ್ಕಳ ತಜ್ಞರು, (2) ಅರವಳಿಕೆ ತಜ್ಞರು ಹಾಗೂ (3) ಸ್ತ್ರೀರೋಗ ತಜ್ಞರುಗಳ ಕೊರತೆಯನ್ನು ನೀಗಿಸಲು ಮಾಸಿಕ ಗರಿಷ್ಟ ರೂ. 50.000 ರವರೆಗೆ ಗೌರವ ಧನ ನೀಡಿ ನೇಮಕ ಮಾಡಿಕೊಳ್ಳಲು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ (ಎನ್.ಆರ್.ಹೆಚ್.ಎಂ) ಅಡಿ ಅವಕಾಶ ಕಲ್ಪಿಸಲಾಗಿದೆ. ಹಾಗೂ ಇದೇ ಯೋಜನೆಯಡಿ ಪ್ರಕರಣವಾರು ಆಧಾರದ ಮೇಲೆ ಪ್ರತೀ ಪ್ರಕರಣವೊಂದಕ್ಕೆ (1) ಮಕ್ಕಳ ತಜ್ಞರಿಗೆ ರೂ.500,

(2) ಅರವಳಿಕೆ ತಜ್ಞರಿಗೆ ರೂ.1.000 ಹಾಗೂ (3) ಸ್ತ್ರೀರೋಗ ತಜ್ಞರಿಗೆ ರೂ.1.500 ರಂತೆ ನೀಡಲು ಸಹ ಅವಕಾಶ ಕಲ್ಪಿಸಲಾಗಿದೆ.

3. ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣಾ ಯೋಜನೆ (ಕೆ.ಹೆಚ್.ಎಸ್.ಡಿ.ಆರ್.ಪಿ) ರ ಅಡಿಯಲ್ಲಿ ಕ್ರಮ ಸಂಖ್ಯೆ: 2 ರಲ್ಲಿ ವಿವರಿಸಿರುವ 3 ತಜ್ಞತೆಗಳನ್ನು ಹೊರತುಪಡಿಸಿ ಉಳಿದ ತಜ್ಞತೆಯಲ್ಲಿ ಮಾಸಿಕ ರೂ.5.000 ಗೌರವ ಧನ ನೀಡಿ ರಿಟೈನರ್‌ಶಿಪ್ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇದೇ ಕೆ.ಹೆಚ್.ಎಸ್.ಆರ್.ಡಿ.ಪಿ. ಯೋಜನೆಯಡಿ, ಸದರಿ ತಜ್ಞರು ಹೊರರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ರೂ. 1.000 ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಆದರೆ ವಾರಕ್ಕೆ ಎರಡು ದಿನಕ್ಕೆ ಮಾತ್ರ ಅಂತಹ ಸೇವೆಯನ್ನು ಪಡೆಯಲು ಮಿತಿಗೊಳಿಸಲಾಗಿದೆ.

4. ಇಲಾಖೆಯಲ್ಲಿ ಖಾಲಿ ಇರುವ 562 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಮುಗಿದ ನಂತರ ಆದ್ಯತಾನುಸಾರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಶ್ರೀ ಕೆ.ಬಿ. ಚಂದ್ರಶೇಖರ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ನಾನು ನನ್ನ ಕ್ಷೇತ್ರದಲ್ಲಿ ವೈದ್ಯರು ಕೊರತೆ ಇದೆಯೆಂದು ಕೇಳಿದ್ದಕ್ಕೆ ಹೌದು ಎಂದು ಹೇಳಿದ್ದಾರೆ. ತಜ್ಞವೈದ್ಯರ 4 ಹುದ್ದೆಗಳು ನಮ್ಮ ಕೆ.ಆರ್.ಪೇಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಇದೆ. ಇದು ತಾಲ್ಲೂಕು ಹೆಡ್‌ಕ್ವಾರ್ಟರ್ಸ್ ಆಸ್ಪತ್ರೆಯಾಗಿದೆ. ಇಂಥ ಆಸ್ಪತ್ರೆಯಲ್ಲಿ 4 ತಜ್ಞ ವೈದ್ಯರುಗಳು ಕೆಲಸ ಮಾಡದಿದ್ದರೆ ಆ ಕ್ಷೇತ್ರದ ರೋಗಿಗಳ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಮಾನ್ಯ ಆರೋಗ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ವೈಯಕ್ತಿಕವಾದ ಭಾವನೆ ಏನೆಂದರೆ, ಇಡೀ ರಾಜ್ಯದ ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಂಡಿದ್ದೀರಿ. ನಿವೃತ್ತಿಯಾಗಿರುವ ವೈದ್ಯರುಗಳನ್ನು ಇಲಾಖೆಯಲ್ಲಿ

ಇನ್ನೂ ಎರಡು ಮೂರು ವರ್ಷ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟರೆ ಇಡೀ ರಾಜ್ಯಕ್ಕೆ ಅನುಕೂಲವಾಗುತ್ತದೆ ಎಂಬ ಸಲಹೆಯನ್ನು ಹೇಳಬಯ ಸುತ್ತೇನೆ. ತಜ್ಞ ವೈದ್ಯರನ್ನು ಸೃಷ್ಟಿ ಮಾಡುವ ಸಂದರ್ಭದಲ್ಲಿ ಸರ್ಕಾರ ಆ ವಿದ್ಯಾರ್ಥಿಯ ಮೇಲೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತದೆ. ಆದರೆ, ಆ ತಜ್ಞ ವೈದ್ಯರು ತಮ್ಮ ವಿದ್ಯಾಭ್ಯಾಸ ಮುಗಿದು ಪದವಿಯನ್ನು ತೆಗೆದುಕೊಂಡಮೇಲೆ ಫಾರಿನ್‌ಗೆ ಹೋಗುವುದೋ ಅಥವಾ ಖಾಸಗಿಯಾಗಿ ನರ್ಸಿಂಗ್ ಹೋಮ್ ಮಾಡತಕ್ಕ ಈ ಸಂದರ್ಭವನ್ನು ನಾವು ನೀವೆಲ್ಲರೂ ಅರ್ಥ ಮಾಡಿಕೊಂಡಿ ದ್ದೇವೆ. ಆದ್ದರಿಂದ, ಇನ್ನು ಮುಂದಾದರೂ ತಜ್ಞವೈದ್ಯ ವಿದ್ಯಾರ್ಥಿಗಳು ಕಡ್ಡಾಯವಾಗಿ ಗ್ರಾಮಾಂತರ ಪ್ರದೇಶದಲ್ಲಿ ಎರಡು ವರ್ಷ ಸೇವೆ ಸಲ್ಲಿಸಬೇಕೆಂದು ಹೇಳಿ ಆನಂತರ ಸರ್ಟಿಫಿಕೇಟನ್ನು ಕೊಟ್ಟರೆ ಆ ತಜ್ಞ ವೈದ್ಯರುಗಳು ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡಲು ಅರ್ಹತೆಯಾ ಗುತ್ತದೆ, ಎಂದು ತಮ್ಮ ಮೂಲಕ ಮನವಿಮಾಡುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಒಬ್ಬ ವೈದ್ಯರು ಮೂರೂವರೆ ವರ್ಷದಿಂದ ಸರ್ಕಾರಿ ರಜೆ ಹಾಕಿ ನರ್ಸಿಂಗ್ ಹೋಮ್ ಮಾಡಿದ್ದಾರೆ. ಆದರೂ ಸರ್ಕಾರ ಅವರ ಮೇಲೆ ಯಾವುದೇ ರೀತಿ ಕಾನೂನು ಕ್ರಮ ಕೈಗೊಂಡಿರುವುದಿಲ್ಲ.

ಅಧ್ಯಕ್ಷರು : ಇಲ್ಲ. ಅವರು ಕೆ.ಆರ್. ಪೇಟೆಗೆ ಸಂಬಂಧ ಪಟ್ಟ ವಿಚಾರವನ್ನು ಮಾತ್ರ ಕೇಳಿದ್ದಾರೆ. ನೀವು ಕೇಳುವುದಿದ್ದರೆ ಪ್ರತ್ಯೇಕವಾದ ಪ್ರಶ್ನೆ ಕೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ರಾಜ್ಯ ಮಟ್ಟದ ಸಮಸ್ಯೆಯನ್ನೂ ಸ್ವಲ್ಪ ಕೈಗೆತ್ತಿಕೊಳ್ಳಿ. ನೀವು 15 ಪ್ರಶ್ನೆಗೆ ಅವಕಾಶ ಕೊಡುತ್ತೀರಿ. ಇಡೀ ರಾಜ್ಯದ ಸಮಸ್ಯೆಯ ಬಗ್ಗೆ ಅದರಲ್ಲಿ ಬೆಳಕು ಚೆಲ್ಲಲು ಆಗುವುದಿಲ್ಲ. ನಾನೂ ಪ್ರಶ್ನೆಯನ್ನು ಹಾಕಿದ್ದೆ. ಅದು Un-starred ಆಗಿದೆ.

ಅಧ್ಯಕ್ಷರು : ನೀವು ಆ ರೀತಿ ಪ್ರಶ್ನೆ ಮಾಡಲು ಬರುವುದಿಲ್ಲ. ನಿಮಗೆ ಅನುಮತಿಯನ್ನು ಕೊಟ್ಟಿಲ್ಲ. ನೀವು ಪ್ರತ್ಯೇಕ ಪ್ರಶ್ನೆ ಕೇಳಿ. ಮಾನ್ಯ ಸಚಿವರೆ, ತಾವು ಉತ್ತರ ಹೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮೂರೂವರೆ ವರ್ಷದಿಂದ ಒಬ್ಬರು ವೈದ್ಯಾಧಿಕಾರಿ ರಜೆಯ ಮೇಲಿದ್ದಾರೆ. ಮೂರೂವರೆ ವರ್ಷದಿಂದ ಅವರು

ಅಲ್ಲೇ ನರ್ಸಿಂಗ್ ಹೋಮ್ ಮಾಡುತ್ತಿದ್ದಾರೆ. ಅವರು voluntary retirement ಗೆ apply ಮಾಡಿದ್ದಾರೆ. ಅದನ್ನೂ ಕೊಟ್ಟಿಲ್ಲ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ರಾಜೀನಾಮೆಯನ್ನೂ ತೆಗೆದು ಕೊಂಡಿಲ್ಲ. ಮೂರು ವರ್ಷವಾದರೂ ಸರ್ಕಾರದಿಂದ ತೀರ್ಮಾನ ತೆಗೆದುಕೊಂಡಿಲ್ಲ.

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ನೀವು ಏನೇ ಹೇಳಿದರೂ ದಾಖಲೆಗೆ ಹೋಗುವುದಿಲ್ಲ. ಅವರು ಮಾತನಾಡಿದ್ದು ಯಾವುದೂ ದಾಖಲೆಗೆ ಹೋಗಬಾರದು. ಈಗ ಹೇಳಿ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಕೆ.ಆರ್.ಪೇಟೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ 9 ತಜ್ಞವೈದ್ಯರ ಹುದ್ದೆಗಳು, 2 ದಂತ ವೈದ್ಯರ ಹುದ್ದೆಗಳು ಮಂಜೂರಾತಿಯಾಗಿತ್ತು. ಈ ಪೈಕಿ 5 ತಜ್ಞವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. 4 ಮಂದಿ ವೈದ್ಯಾಧಿಕಾರಿಯವರು, ಮೂಳೆ ತಜ್ಞರು, ಮಕ್ಕಳ ತಜ್ಞರು, ಇ.ಎನ್.ಟಿ. ತಜ್ಞರ ಹುದ್ದೆ ಖಾಲಿ ಇರುತ್ತದೆ. ಒಳರೋಗಿಗಳು ಸುಮಾರು 6884 ಮಂದಿ, ಹೊರ ರೋಗಿಗಳು 1,77.888 ಮಂದಿ. ವೈದ್ಯರ ಕೊರತೆಯಿದೆಯೆಂದು ಏನು ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ, ಬಹಳಷ್ಟು ಜನ ಎಂ.ಬಿ.ಬಿ.ಎಸ್. ಡಾಕ್ಟರ್‌ಗಳು ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸಲು ಒಪ್ಪುತ್ತಿಲ್ಲ. ಮೊನ್ನೆ ನಾವು ಏನು 815 ಮಂದಿ ವೈದ್ಯರುಗಳನ್ನು ನೇಮಕ ಮಾಡಿಕೊಂಡೆವೋ ಅವರು ಕಡ್ಡಾಯವಾಗಿ ಮೂರು ವರ್ಷ ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸಬೇಕೆಂದು ಒಂದು ಕ್ಲಾಸ್‌ನ್ನು ಮಾಡಿ ನೇಮಕಾತಿಯ ಆದೇಶವನ್ನು ಕೊಡುತ್ತಿದ್ದೇವೆ. ಮುಂದೆ ಏನು 500 ಮಂದಿ ಹೊಸದಾಗಿ ವೈದ್ಯರನ್ನು ತೆಗೆದುಕೊಳ್ಳುತ್ತಿದ್ದೇವೋ ಅವರಿಗೆಲ್ಲಾ ಕಡ್ಡಾಯವಾಗಿ ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸುವುದನ್ನು ಮಾಡುತ್ತೇವೆ.

ಶ್ರೀ ಕೆ.ಬಿ. ಚಂದ್ರಶೇಖರ್ : ಮಕ್ಕಳ ತಜ್ಞರಿಗೆ 500 ರೂಪಾಯಿ, ಅರೆವಳಿಕೆ ತಜ್ಞರಿಗೆ 1.000 ರೂಪಾಯಿ, ಸ್ತ್ರೀರೋಗ ತಜ್ಞರಿಗೆ 1.500 ರೂಪಾಯಿ ಎಂದು ಏನು ಉತ್ತರದಲ್ಲಿ ಹೇಳಿದ್ದೀರಿ ಈ ಹಣವನ್ನು ಯಾರು ಕೊಡುತ್ತಾರೆ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಬಿ. ಶ್ರೀರಾಮುಲು : ಮಕ್ಕಳ ತಜ್ಞರಾಗಿರಬಹುದು. ಅರೆವಳಿಕೆ ತಜ್ಞರಾಗಿರಬಹುದು, ಸ್ತ್ರೀರೋಗ ತಜ್ಞರಾಗಿರಬಹುದು ಅವರಿಗೆ ಗರಿಷ್ಠ

ಎಂದರೆ ಒಂದು ತಿಂಗಳಿಗೆ 50.000 ರೂಪಾಯಿ ಗೌರವಧನವನ್ನು ಕೊಡಬ ಹುದು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಉದಾಹರಣೆಗೆ ಅವರು ಒಂದು ಕೇಸ್ ತೆಗೆದುಕೊಂಡರೆ 500 ರೂಪಾಯಿ, ಎರಡು ಕೇಸು ತೆಗೆದುಕೊಂಡರೆ ಸಾವಿರ ರೂಪಾಯಿ ಆಗುತ್ತದೆ. ಅಕಸ್ಮಾತ್ 50.000 ರೂಪಾಯಿಗಿಂತ ಜಾಸ್ತಿಯಾದರೆ ನಾವು ಕೊಡಲು ಆಗುವುದಿಲ್ಲ.

ಶ್ರೀ ಕೆ.ಬಿ. ಚಂದ್ರಶೇಖರ್ : ತಜ್ಞ ವೈದ್ಯರಿಗೆ 50 ಸಾವಿರ ರೂಪಾಯಿ ಗೌರವಧನ ಕೊಡುತ್ತೇವೆ ಎನ್ನುವುದು ಸ್ವಾಭಾವಿಕ ಮತ್ತು ಸತ್ಯ. ಆದರೆ, ತಜ್ಞ ವೈದ್ಯರೇ ಇಲ್ಲದಿದ್ದರೆ ನಾವು ಏನು ಮಾಡಬೇಕು? ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ಸ್ತ್ರೀರೋಗ, ಮಕ್ಕಳ ತಜ್ಞ ವೈದ್ಯರು ಇಲ್ಲದಿದ್ದರೆ ಏನು ಮಾಡಬೇಕು ಎಂಬುದನ್ನು ದಯಮಾಡಿ ತಿಳಿಸಬೇಕು. ತಜ್ಞ ವೈದ್ಯರು ವ್ಯಾಸಂಗ ಮಾಡುತ್ತಿರುವ ಸಂದರ್ಭದಲ್ಲೇ ಅವರಿಗೆ ಡಿಗ್ರಿಯನ್ನು ಕೊಡುವಾಗ ಮೂರು ವರ್ಷ ಕಡ್ಡಾಯವಾಗಿ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡಬೇಕು, ಅನಂತರ ಡಿಗ್ರಿ ಸರ್ಟಿಫಿಕೇಟನ್ನು ಕೊಡುವ ಕೆಲಸ ಮಾಡುವುದು ಒಳ್ಳೆಯದು ಎಂದು ನನ್ನ ಸಲಹೆ.

(12-00 PM)

ಅಧ್ಯಕ್ಷರು : ಮಾನ್ಯ ಸಚಿವರು ಮಾನ್ಯ ಸದಸ್ಯರು ಸಲಹೆಗೆ ಉತ್ತರ ಹೇಳಿ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸಲಹೆಯನ್ನು ಕೊಟ್ಟಿದ್ದಾರೆ. ಆದರೆ ಎಲ್ಲಾ ವಿಷಯಗಳೂ ಅವರಿಗೆ ಗೊತ್ತಿದೆ. ಆದರೂ ಕೂಡ ಅವರು ಪ್ರಶ್ನೆ ಮೂಲಕ ಇಲ್ಲಿ ಪ್ರಸ್ತಾಪಿಸಿದ್ದಾರೆ. ಮಾನ್ಯ ಸದಸ್ಯರು ಸಲಹೆಗಳನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಶಾಸಕರು 'ನಮ್ಮ ಊರಿನಲ್ಲಿ Specialist ಇಲ್ಲ, ಗೈಸೋಕಾಲಜಿಸ್ಟ್ ಇಲ್ಲ' ಎಂದು ಹೇಳುತ್ತಿದ್ದಾರೆ. ಮಾನ್ಯ ಸಚಿವರು ಅದಕ್ಕೆ 50 ಸಾವಿರ ರೂ.ಗಳವರೆಗೆ ಗೌರವಧನ ನೀಡಿ ತಜ್ಞ ವೈದ್ಯರನ್ನು ನೇಮಕ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ' ಎಂದು ಉತ್ತರ ನೀಡಿದರು. ಶಾಸಕರ ಸಂಬಂಧಿಕರು ಅಂದರೆ ಅವರ ಸ್ವಂತ ಮಗನೇ ಸರ್ಕಾರಿ ವೈದ್ಯರಾಗಿದ್ದಾರೆ. ಶಾಸಕರು ತಮ್ಮ ಮಗನನ್ನೇ 'ನಮ್ಮ ಜಾಗಕ್ಕೆ ಬಾರಪ್ಪ' ಎಂದು ಕರೆದರೆ ಈ ಸಮಸ್ಯೆಯೇ ಬಗೆಹರಿಯುತ್ತದೆ. ದಯವಿಟ್ಟು ನಿಮ್ಮ ಮಗನನ್ನೇ ನಿಮ್ಮಲ್ಲಿಗೆ ಬರಲಿಕ್ಕೆ ಹೇಳಿ.

ಇದರಿಂದ ನಿಮ್ಮ ಊರಿಗೂ ಅನುಕೂಲವಾಗುತ್ತದೆ ಮತ್ತು ರೋಗಿಗಳಿಗೂ ಅನುಕೂಲವಾಗುತ್ತದೆ. ನಿಮ್ಮ ಸಮಸ್ಯೆಯೂ ಕೂಡ ಪರಿಹಾರವಾಗುತ್ತದೆ.

ರಾಜ್ಯದಲ್ಲಿ ಹೆಚ್1ಎನ್1 ಸೋಂಕಿಗೆ ತುತ್ತಾದವರು

56 (58) ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇಲ್ಲಿಯವರೆಗೆ ಹೆಚ್1ಎನ್1 ಸೋಂಕಿಗೆ ಸಾವನ್ನಪ್ಪಿದವರ ಸಂಖ್ಯೆ ಎಷ್ಟು?

ಆ) ಹೆಚ್1ಎನ್1 ಸೋಂಕನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು

ಇ) ಈ ಸೋಂಕಿನಿಂದ ಮೃತಪಟ್ಟ ಕುಟುಂಬಗಳಿಗೆ ಸರ್ಕಾರ ಆರ್ಥಿಕ ನೆರವನ್ನು ನೀಡಿದೆಯೇ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ದಿನಾಂಕ: 07-12-2009 ರವರೆಗೆ ರಾಜ್ಯದಲ್ಲಿ ಹೆಚ್1ಎನ್1 ಸಾಂಕ್ರಾಮಿಕ ರೋಗದಿಂದ ಒಟ್ಟು 126 ಮರಣಗಳು ಸಂಭವಿಸಿರುತ್ತವೆ.

ಆ) ರಾಜ್ಯದಲ್ಲಿ ಹೆಚ್1ಎನ್1 ಸೋಂಕನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಇ) ಹೆಚ್1ಎನ್1 ಸೋಂಕಿನಿಂದ ಮೃತಪಟ್ಟ ರೋಗಿಗಳ ಅವಲಂಬಿತರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಆರ್ಥಿಕ ನೆರವು ನೀಡಲು ಅವಕಾಶವಿರುವುದಿಲ್ಲ.

ಅನುಬಂಧ-1

ಕರ್ನಾಟಕ ರಾಜ್ಯದಲ್ಲಿ ಇನ್‌ಫ್ಲೂಯೆಂಜಾ ಎ. (ಹೆಚ್1ಎನ್1) ಸೋಂಕು ರೋಗವನ್ನು ಹರಡದಂತೆ ತಡೆಗಟ್ಟಲು ತೆಗೆದುಕೊಂಡಿರುವ ಮುಂಜಾಗ್ರತೆ ಮತ್ತು ನಿಯಂತ್ರಣ ಕ್ರಮಗಳು